ಎಂದು ತಿಳಿದುಕೊಳ್ಳಲು ತಟಸ್ಥವಾಗಿ ನಿಲ್ಲುತ್ತಿದ್ದಳು. ಅವನನ್ನು ಗಮನಿಸಿದ ಆಕೆ ಹಸಿರು ಸಿಗ್ನಲ್ ಬಂದರೂ ಈ ದಿಕ್ಕಿಗೆ ಬಾರದೆ ಅವನೆ ಅವಳಿದ್ದಲ್ಲಿಗೆ ಬರಲಿ ಎಂದು ನಿಂತಿದ್ದಳು. ಅವನ ಮನಸ್ಸಿನಲ್ಲಿ ಬಯಕೆಗಳಿರಲಿಲ್ಲವಾದರೂ ಆಕೆಯನ್ನು ಹಿಂದೊಮ್ಮೆ ಬಹಳ ಸನಿಹದಿಂದ ನೋಡಿರುವಂತೆ ಮತ್ತು ಏನೋ ಮಾತನಾಡಿರುವಂತೆ ಅನ್ನಿಸತೊಡಗಿತು. ನೆನಪು ನಿಖರವಾಗಿಲ್ಲದಿದ್ದರೂ ಅವಳ ಜೊತೆಯಲ್ಲಿ ತಾನು ಎಂದೋ ಯಾವುದೋ ಗಲಾಟೆ ಮಾಡಿಕೊಂಡಿದ್ದಿರಬಹುದು ಎಂಬಂತಹ ಗುಮಾನಿಗೊಳಗಾದ. ಹಳೆಯ ನೆನಪು ಜಾಗೃತವಾಯಿತಾದರೂ ಸ್ಪಷ್ಟವಾಗಲಿಲ್ಲ. ಜೊತೆಗೆ ಆ ಹೆಂಗಸೂ ತನ್ನನ್ನೆ ನೋಡುತ್ತಿದ್ದುದನ್ನು ಗಮನಿಸಿ ಆಕೆ ಪರಿಚಿತಳೆ ಇರಬಹುದೆನ್ನಿಸಿ ಅವಳನ್ನೆ ನೋಡುತ್ತಾ ಅವಳ ಬಳಿ ಬಂದು ನಿಂತ.

ಆ ವೇಳೆಗೆ ಅವಳು ಯಾರೆಂದು ಅರಿವಾಯಿತು.

ಹತ್ತಿರ ಬಂದವನಿಗೆ ಹಿಂದೆ ತಾನು ಯಜಮಾನನಂತೆ ಮೆರೆಯುತ್ತಿದ್ದ ಕಾಲದಲ್ಲಿ ಹದಿನೇಳರಿಂದ ಹದಿನೆಂಟು ವರ್ಷ ಪ್ರಾಯದೊಳಗಿರಬಹುದಾದ ಹುಡುಗಿಯೊಬ್ಬಳು ನಟನೆಗಾಗಿ ಅವಕಾಶ ಕೇಳಿಕೊಂಡು ಬಂದು ನಮ್ರತೆಯಿಂದ ತನ್ನೆದುರು ತಲೆಬಾಗಿಸಿ ನಿಂತದ್ದು ಮತ್ತು ತಾನು ತೀರಾ ತೀರಾ ಕೆಟ್ಟದಾಗಿ ಬೈದದ್ದು ರೀಲಿನಂತೆ ಸುತ್ತಿ ಹಾಗೆಯೆ ಮರೆಯಾಯ್ತು. ಗುರುತು ಸಿಕ್ಕಂತಾಗಿ 'ನೀನಾ?...' ಎಂದು ಉದ್ಗರಿಸಿದ.

★★★

ಹತ್ತು ನಿಮಿಷದ ಬಳಿಕ ರಸ್ತೆ ಪಕ್ಕದ ಸಣ್ಣ ರೆಸ್ಟೋರೆಂಟಿನ ಫ್ಯಾಮಿಲಿ ರೂಮಿನ ಕ್ಯಾಬಿನ್ನಿನಲ್ಲಿ ಅವರಿಬ್ಬರೂ ಎದುರುಬದುರಾಗಿ ಕುಳಿತಿದ್ದರು. ಆಕೆಯ ಪರಿಚಯದ ಸಪ್ಲೈಯರ್ ಆಕೆಯನ್ನು ನೋಡಿ ಪರಿಚಯದ ನಗು ನಕ್ಕು ಅವಳು ಹೇಳಿದ ಆರ್ಡರು ತರಲು ಹೋದ. ಆ ಸಪ್ಲೈಯರ್ ಮೇಕಪ್ ಇಲ್ಲದ ಆ ಮಾಜಿ ನಟನನ್ನು ಗುರುತಿಸಿದಂತೇನೂ ಕಾಣಲಿಲ್ಲ.

